ಹಿಂದುಳಿದ ತಾಲ್ಲೂಕುಗಳಾದ ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ, ಸಂಡೂರು ಭಾಗದ ರೈತರು ಹೈಸೋದ್ಯಮದಲ್ಲಿ ತೊಡಗಿಸಿಕೊಂಡು ಅವರ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವುದಕ್ಕೆ ಈ ಹಾಲು ಶೀಥಲೀಕರಣದ ಘಟಕದ ಅವಶ್ಯಕತೆ ಬಹಳವಾಗಿದೆ. ಈ ಭಾಗದ ಹಾಲೂ 70 ಕಿ.ಮೀ ದೂರದಲ್ಲಿರುವ ಇಟಗಿಗೆ ಹೋಗುತ್ತಿದೆ. ಅದರಿಂದಾಗಿ ರೈತರಿಗೆ ತೊಂದರೆಯಾಗುತ್ತಿದೆ. ಆದುದರಿಂದ, ತಕ್ಷಣ ಈ ಯೋಜನೆಯನ್ನು ಪ್ರಾರಂಭಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮಂತ್ರಿಯವರನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ಮಹದೇವ:- ಈ ಎಲ್ಲಾ ವಿಷಯವನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

38(435):- ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ (ಶಿವಮೊಗ್ಗ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1. ಶಿವಮೊಗ್ಗ ನಗರ ಗಾಂಧಿ ಪಾರ್ಕಿನಲ್ಲಿ ಅಂಬೇಡ್ಕರ್ ಭವನ ನಿರ್ಮಾಣ ಯೋಜನೆ ಯಾವ ಹಂತದಲ್ಲಿದೆ?

2. ಈ ಯೋಜನೆಗೆ ಇದುವರೆಗೆ ಸರ್ಕಾರದ ವತಿಯಿಂದ ಹಾಗೂ ಇತರೆ ಇಲಾಖೆ ವತಿಯಿಂದ ಎಷ್ಟು ಹಣ ಬಿಡುಗಡೆಯಾಗಿರುತ್ತದೆ?

3. ಈ ಪೈಕಿ ಎಷ್ಟು ಹಣ ಖರ್ಚಾಗಿರುತ್ತದೆ?

4. 3-4 ವರ್ಷಗಳಿಂದ ಕಾಮಗಾರಿ ಅಪೂರ್ಣಗೊಂಡು ನೆನೆಗುದಿಗೆ ಬಿದ್ದಿರುವುದಕ್ಕೆ ಕಾರಣಗಳೇನು?

5. ಈ ಕಾಮಗಾರಿಯನ್ನು ಯಾವಾಗ ಪೂರ್ಣ-ಗೊಳಿಸಲಾಗುವುದು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

1. 1ನೇ ಮಹಡಿಯ ಕಾಮಗಾರಿ ಕೆಲಸ ಮೇಲ್ಚಾವಣಿಯ ಮಟ್ಟಕ್ಕೆ ಬಂದಿದೆ.

2. 1. ಸರ್ಕಾರದ ವತಿಯಿಂದ ರೂ. 5.00

2. ಇತರೆ ಮೂಲಗಳಿಂದ ಸ್ಥಳೀಯವಾಗಿ - ರೂ. 52.05

ಒಟ್ಟು ರೂ. 57.05 ಲಕ್ಷ

3. ರೂ. 38.00 ಲಕ್ಷ, ಹಣ ಖರ್ಚಾಗಿರುತ್ತದೆ.

4. ಕೆಲವು ನ್ಯೂನತೆಗಳಿಂದ ಕಾಮಗಾರಿ ಕೆಲಸ ಸ್ಥಗಿತಗೊಂಡಿತ್ತು ನ್ಯೂನತೆಗಳನ್ನು ಸರಿಪಡಿಸಲು ಪ್ರೊಫೆಸರ್ ಆರ್. ಜಗದೀಶ್. ಸಿವಿಲ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರು, ಬೆಂಗಳೂರು ವಿಶ್ವವಿದ್ಯಾನಿಲಯ, ಇವರ ನೇತೃತ್ವದಲ್ಲಿ ನೇಮಿಸಲಾಗಿದ್ದ ತಾಂತ್ರಿಕ ಸಮಿತಿ ವರದಿಯ ಅನುಸಾರ ನ್ಯೂನತೆ ಸರಿಪಡಿಸುವ ಹಾಗೂ ಜೀರ್ಣೋದ್ಧಾರ ಕಾರ್ಯ ಪ್ರಾರಂಭವಾಗಿದ್ದು ಕೆಲಸ ಪ್ರಗತಿಯಲ್ಲಿದೆ.

5. ನ್ಯೂನತೆಯ ದುರಸ್ತಿ ಹಾಗೂ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ:- ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ನಗರದ ಗಾಂಧಿ ಪಾರ್ಕ್‌ನಲ್ಲಿ ಮಹಾತ್ಮ ಗಾಂಧಿ ಹೆಸರಿನಲ್ಲಿ ಒಳ್ಳೆಯ ಅಂಬೇಡ್ಕರ್ ಭವನವನ್ನು ಕಟ್ಟುತ್ತಿದ್ದಾರೆ. ಇವತ್ತು ಮಹಾತ್ಮಗಾಂಧಿಗೆ ಅವಮಾನವಾಗುತ್ತಿದೆ. ಅಂಬೇಡ್ಕರ್ ಹೆಸರು ಹೇಳಿ ಲಕ್ಷಾಂತರ ರೂಪಾಯಿಗಳನ್ನು ಲೂಟಿ ಮಾಡುತ್ತಿದ್ದಾರೆ. ಅದನ್ನು ನೋಡಿದರೆ ಅಲ್ಲಿ ಪೂರ್ಣ ಕಳಪೆ ಕಾಮಗಾರಿಯಾಗಿದೆ. ಅದರ ಬಗ್ಗೆ ತನಿಖೆಯಾಗಬೇಕು. ನಗರಸಭೆಯಿಂದ ನಾವು 13 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. 4-5 ವರ್ಷಗಳಿಂದ ಕೆಲಸ ನಡೆಯುತ್ತಿದೆ. ವಿಧಾನಸೌಧವನ್ನೇ 3 ವರ್ಷಗಳಲ್ಲಿ ಕಟ್ಟಿ ಮುಗಿಸಿದ್ದಾರೆ. ಆದರೆ, ಒಂದು ಸಣ್ಣ ಅಂಬೇಡ್ಕರ್ ಭವನವನ್ನು 5-6 ವರ್ಷಗಳಾದರೂ ಕಟ್ಟಿ ಮುಗಿಸುವುದಕ್ಕಾಗಿಲ್ಲ. ಮಾನ್ಯ ಮಂತ್ರಿಯವರು ಇದರ ಬಗ್ಗೆ ತನಿಖೆ ಮಾಡಿಸಬೇಕು. ಅದರ ಪಕ್ಕದಲ್ಲಿಯೇ ಆನೇಕ ಶಾಲೆಗಳಿವೆ. ಅದನ್ನು ನೋಡಲು ಅವಮಾನವಾಗುತ್ತದೆ ಆ ಭಾಗಕ್ಕೆ ಹೋದರೆ ಎಲ್ಲರಿಗೂ ಬೇಜಾರಾಗುತ್ತದೆ. ಇದರ ಬಗ್ಗೆ ಮಂತ್ರಿಗಳು ಉತ್ತರಿಸಬೇಕು.

ಶ್ರೀ ಎ. ಕೃಷ್ಣಪ್ಪ:- ಮಾನ್ಯ ಅಧ್ಯಕ್ಷರೆ ಮಾನ್ಯ ಸದಸ್ಯರು ಹೇಳಿದ ಪರಿಸ್ಥಿತಿ ಸರಿಯಾಗಿದೆಯೇ ಇದೆ. ಆದರೆ, ಸರ್ಕಾರ ಇದನ್ನು ಬಹಳ ಹಿಂದೆಯೇ ಪ್ರಾರಂಭಿಸಿ, ಈ ಕೆಲಸದ ಗುಣಮಟ್ಟ ಸುಧಾರಣೆ ಮಾಡಲಿಕ್ಕಾಗಲಿಲ್ಲವೆಂದು ಸರ್ಕಾರದ ಗಮನಕ್ಕೆ ಬಂದ ಮೇಲೆ ಪ್ರೋ ಆರ್. ಜಗದೀಶ್, ಸಿವಿಲ್ ಇಂಜಿನಿಯರ್ ವಿಭಾಗದ ಮುಖ್ಯಸ್ಥರನ್ನು ತನಿಖೆಗಾಗಿ ನೇಮಿಸಿದ್ದು, ಈಗಾಗಲೇ ಅವರು ತನಿಖೆ ಮಾಡಿದ್ದಾರೆ. ಏನೇನು ನ್ಯೂನತೆಗಳಿವೆ. ಅದನ್ನು ಸರ್ಕಾರದ ಗಮನಕ್ಕೆ ಸಹ ತಂದಿದ್ದಾರೆ. ಆ ನ್ಯೂನತೆಗಳನ್ನು ಸರಿಪಡಿಸಿ, ಆ ಕೆಲಸವನ್ನು ಆದಷ್ಟು ಬೇಗ ಮುಗಿಸಲು ನಾವು ಪ್ರಯತ್ನಿಸುತ್ತಿದ್ದೇವೆ. ಆದರೆ ಸರ್ಕಾರಕ್ಕೆ ನೇರವಾಗಿ ಕಟ್ಟಬೇಕಾದ ಹಣವನ್ನು ಕಟ್ಟದ ಸಾಲದ ಹಣವನ್ನು ಲೋಕಲ್ ಇನ್ಸ್‌ಟಿಟ್ಯೂಷನ್ಸ್‌ನಿಂದ ಏನು ಸರಿದೂಗಿಸಬೇಕಾಗಿದೆ. ಅದನ್ನು ಮಾಡಿದರೆ ಸೂಪರ್ ವಿಷನ್ ಹಾಗೂ ಇಂಪ್ಲಿಮೆಂಟೇಷನ್‌ಗೆ ನಾವು ಖಾತ್ರಿ ಕೊಡುತ್ತೇವೆ.

ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ:- ಮಾನ್ಯ ಅಧ್ಯಕ್ಷರೆ, ಈಗಾಗಲೇ ಆ ಹಣವನ್ನು ಕೊಟ್ಟಾಗಿದೆ. ಈಗಾಗಲೇ ಅಲ್ಲಿ 7-8 ಕಡೆ ಗುಂಡಿ ಬಿದ್ದು ಕಟ್ಟಡ ಒಡೆದು ಬೀಳುವ ಸ್ಟೇಜ್‌ನಲ್ಲಿದೆ. ಆದ್ದರಿಂದ ಅದನ್ನು ಆದಷ್ಟು ಶೀಘ್ರವಾಗಿ ಕಂಪ್ಲೀಟ್ ಮಾಡಿದರೆ ಒಳ್ಳೆಯದು.

ಶ್ರೀ ಎ. ಕೃಷ್ಣಪ್ಪ:- ಯಾರಾದರೂ ಎಕ್ಸ್‌ಪರ್ಟ್ ಒಬ್ಬರನ್ನು ಅಲ್ಲಿಗೆ ಒಂದು ವಾರದಲ್ಲಿ ಕಳುಹಿಸಿ, ವರದಿ ಪಡೆದು, ಅದು ಬಿದ್ದುಹೋಗುವ ಕಟ್ಟಡವಾಗಿದ್ದರೆ ಅದರಲ್ಲಿ ಮಕ್ಕಳನ್ನು ಕೂಡಿಸಲಾಗುವುದಿಲ್ಲ ಮತ್ತು ಅದನ್ನು ಉಪಯೋಗಿಸಲು ಆಗುವುದಿಲ್ಲ. ಅದನ್ನು ಅದಲು-ಬದಲು ಮಾಡಲು ಅವಕಾಶವಿದೆಯೇ ಎಂದು ನೋಡಿ, ನಮ್ಮ ಆರ್ಥಿಕ ಸಂಪನ್ಮೂಲಗಳನ್ನು ಗಮನದಲ್ಲಿಟ್ಟುಕೊಂಡು ತುರ್ತಾಗಿ ನಾನು ತೀರ್ಮಾನಿಸುತ್ತೇನೆ. ಅಲ್ಲಿಗೆ ಹೋಗುವಾಗ ಹಿರಿಯ ಅಧಿಕಾರಿಗಳ ಜೊತೆ ಸದಸ್ಯರೂ ಹೋಗುವಂತೆ ಏರ್ಪಾಟು ಮಾಡುತ್ತೇನೆ.